ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 226

ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 22.09.2020

ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಚಿಕ್ಕಮಗಳೂರು ಜಿಲ್ಲೆಯ CDA ರವರಿಂದ ಬಿಹಾರಿ ವಾಜಪೇಯಿ ಬಡಾವಣೆ ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	-ಬಂದಿದೆ-
ಆ)	ಬಂದಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡಲಾಯಿತು ಹಾಗೂ ಇದುವರೆವಿಗೂ ಬಿಡುಗಡೆ ಮಾಡಿರುವ ಅನುದಾನ ಎಷ್ಟು; (ಸಂಪೂರ್ಣ ವಿವರ ಒದಗಿಸುವುದು)	ಶ್ರೀ ಅಟಲ್ ಬಿಹಾರಿ ವಾಜಪೇಯಿ ವಸತಿ ಯೋಜನೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 185 ಮೈಅಪ್ರಾ 2011 ದಿನಾಂಕ: 22-12-2012 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಅದರಂತೆ ಸದರಿ ಯೋಜನೆಗೆ ಪ್ರಾಧಿಕಾರದ ವತಿಯಿಂದ ಕಾರ್ಯಾದೇಶ ನೀಡಿ ಪ್ರಾರಂಭ ಮಾಡಲಾಗಿದ್ದು, ಪ್ರಾಧಿಕಾರದ ಆರ್ಥಿಕ ಪರಿಸ್ಥಿತಿಯು ಸುಸ್ಥಿತಿಯಲ್ಲಿ ಇಲ್ಲದಿರುವ ಕಾರಣದಿಂದಾಗಿ, ಸ್ಥಗಿತಗೊಂಡ ಯೋಜನೆಯನ್ನು ಸೆಪ್ಟೆಂಬರ್- 2017 ರಲ್ಲಿ ಪುನರ್ ಪ್ರಾರಂಭಿಸಲಾಗಿರುತ್ತದೆ. ಸದರಿ ಯೋಜನೆಗೆ ಸರ್ಕಾರದಿಂದ ಯಾವುದೇ ಅನುದಾನವನ್ನು ನೀಡಿರುವುದಿಲ್ಲ. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು KUIDFC ಯಿಂದ ರೂ. 50.00 ಕೋಟಿಗಳ ಸಾಲವನ್ನು ಪಡೆದಿದ್ದು, ಸದರಿ ಯೋಜನೆಯ ಕಾಮಗಾರಿಗಳಿಗೆ ಪ್ರಾಧಿಕಾರದಿಂದ ಇದುವರೆವಿಗೆ ಒಟ್ಟಾರೆ ರೂ. **158.95** ಕೋಟಿಗಳಷ್ಟು ವೆಚ್ಚ ಮಾಡಿರುತ್ತದೆ.
ಇ)	ಕಾಮಗಾರಿ ಕೈಗೆತ್ತಿಕೊಳ್ಳುವ ಮುಂಚೆ ಸರಿಯಾದ ರೀತಿಯಲ್ಲಿ ಯೋಜನೆ ರೂಪಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	-ಇಲ್ಲ-
ಈ)	ಬಂದಿದ್ದಲ್ಲಿ, ಕಾಮಗಾರಿ ವಿಳಂಬವಾಗಲು ಯಾರು ಹೊಣೆ ಹಾಗೂ ಅವರ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ;	2008-09 ನೇ ಸಾಲಿನಲ್ಲಿ ಪ್ರಾಧಿಕಾರದ ವತಿಯಿಂದ ರಚಿಸಲಿರುವ ಬಡಾವಣೆಗಳ ನಿವೇಶನಗಳ ಹಂಚಿಕೆಗಾಗಿ ಬೇಡಿಕೆ ಸಮೀಕ್ಷೆಯನ್ನು ಮಾಡಲಾಗಿತ್ತು. ಅದರಂತೆ 7954 ಸಾರ್ವಜನಿಕರು ನಿವೇಶನಕ್ಕಾಗಿ ನೊಂದಣಿ ಮಾಡಿಕೊಂಡಿದ್ದು, 2012-13 ನೇ ಸಾಲಿನಲ್ಲಿ ಶ್ರೀ ಎ.ಬಿ.ವಾಜಪೇಯಿ ವಸತಿ ಬಡಾವಣೆಗೆ ಅರ್ಜಿಗಳನ್ನು

		ಆಹ್ವಾನಿಸಿದಾಗ ಹಾಗೂ ಶೇ. 10 ರಷ್ಟು ಪ್ರಾರಂಭಿಕ ಠೇವಣಿಯನ್ನು ಪಾವತಿಸಲು ಸಾರ್ವಜನಿಕ ಪ್ರಕಟಣೆ ಹೊರಡಿಸಿದಾಗ ಕೇವಲ 482 ಅರ್ಜಿಗಳು ಮಾತ್ರ ಬಂದಿರುತ್ತವೆ. ಸಾಕಷ್ಟು ಅರ್ಜಿಗಳು ಬಾರದೇ ಇರುವುದರಿಂದ, ಹಣದ ಕೊರತೆಯಿಂದಾಗಿ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿತ್ತು. ಈ ಬಡಾವಣೆಯ ಪ್ರದೇಶವುಗುಡ್ಡಗಾಡು ಪ್ರದೇಶವಾಗಿದ್ದು, ಸ್ಥಳಾಕೃತಿ Topography ಅಸಮವಾಗಿರುವುದರಿಂದ ಹಾಗೂ ಸುಮಾರು 30 ಎಕರೆ ಪ್ರದೇಶದಲ್ಲಿ ಗಟ್ಟಿಕಲ್ಲು ಇರುವುದರಿಂದ ಕಾಮಗಾರಿ ನಿರ್ವಹಿಸುವಲ್ಲಿ ವಿಳಂಬವಾಗಿರುತ್ತದೆ. ಕಳೆದ 2 ವರ್ಷಗಳಲ್ಲಿ ಚಿಕ್ಕಮಗಳೂರಿನಲ್ಲಿ ಮಳೆ ಹೆಚ್ಚಾಗಿದ್ದು, 4 ತಿಂಗಳುಗಳ ಕಾಲ ಸತತವಾಗಿ ಮಳೆ ಬಂದಿರುವುದರಿಂದ ಮತ್ತು ಪ್ರಸ್ತುತ ಸಾಲಿನಲ್ಲಿಯೂ ಸಹ ಜುಲೈ ತಿಂಗಳಿನಿಂದ ಸತತವಾಗಿ ಮಳೆಯಾಗಿರುವುದರಿಂದ ಮತ್ತು ಕೋವಿಡ್-19 ಕಾರಣದಿಂದಾಗಿ ಕಾಮಗಾರಿಯು ವಿಳಂಬವಾಗಿರುತ್ತದೆ. ಕಳೆದ 2 ವರ್ಷಗಳ ಕಾಲ ಮಳೆಗಾಲವನ್ನು ಹೊರೆತುಪಡಿಸಿ, ಕಾಮಗಾರಿಯನ್ನು ನಿರಂತರವಾಗಿ ನಿರ್ವಹಿಸುತ್ತಿದ್ದು, ಸುಮಾರು ಶೇ. 85% ರಷ್ಟುಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿದ್ದು, ಬಾಕಿ ಶೇ. 15% ರಷ್ಟುಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
ಉ)	ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು?	ಕಾಮಗಾರಿಯನ್ನು ನವೆಂಬರ್ 2020 ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದೆಂದು ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ತಿಳಿಸಿರುತ್ತದೆ.

ಸಂಖ್ಯೆ: ನಅಇ 25 ಎಲ್‌ಸಿಕ್ಯೂ 2020 (ಇ-ಕಡತ)

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು.